ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12**

ಸಂಖ್ಯೆ: ಪಪೂಶಿಇ/ಪರೀಕ್ಷೆ/ನೊ&ಫ/2017-18. ದಿನಾಂಕ: 25-10-2017.

(ಖಾಸಗಿ)

**ಅಧಿಸೂಚನೆ**

**ವಿಷಯ:** 2018ರ ಮಾರ್ಚ್ ತಿಂಗಳಲ್ಲಿ ನಡೆಯುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಖಾಸಗಿ ಅಭ್ಯರ್ಥಿಗಳು ನೋಂದಾಯಿಸಿಕೊಳ್ಳಲು ಕೊನೆಯ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

**ಉಲ್ಲೇಖ:** ಈ ಕಛೇರಿ ಸಮ ಸಂಖ್ಯೆ ಅಧಿಸೂಚನೆ ದಿನಾಂಕ 19-08-2017.

* * * * *

ಪದವಿ ಪೂರ್ವ ಶಿಕ್ಷಣ ಇಲಾಖೆಯು ನಡೆಸುತ್ತಿರುವ ದ್ವಿತೀಯ ಪಿಯುಸಿ ಮಾರ್ಚ್ 2018ರ ವಾರ್ಷಿಕ ಪರೀಕ್ಷೆಗೆ ಉಲ್ಲೇಖದನ್ವಯ ಪಿಯುಸಿ ಶಿಕ್ಷಣ ಬೋಧಿಸುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಂಡು ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿಕೊಡುತ್ತಾ ದಿನಾಂಕ 16-10-2017ರ ವರೆಗೆ (₹ 360-00 ಗರಿಷ್ಠ ದಂಡಶುಲ್ಕದೊಂದಿಗೆ) ಕಾಲಾವಕಾಶ ನೀಡಲಾಗಿತ್ತು.

ಅಭ್ಯರ್ಥಿಗಳ ಹಾಗೂ ಪೋಷಕರ ಕೋರಿಕೆ ಹಾಗೂ ಒತ್ತಾಯದ ಮೇರೆಗೆ ಸದರಿ ಕಾಲಾವಕಾಶವನ್ನು ದಿನಾಂಕ 31-10-2017 ರವರೆಗೆ ದಂಡ ಶುಲ್ಕ ₹ 360-00ರ ಜೊತೆಗೆ ವಿಶೇಶ ದಂಡ ಶುಲ್ಕ ₹ 500-00 ನ್ನು ಸೇರಿದಂತೆ ಒಟ್ಟು ದಂಡ ಶುಲ್ಕ **₹ 860-00** ಹಾಗೂ ಸಲ್ಲುವ ಇತರೆ ಶುಲ್ಕದೊಂದಿಗೆ ನೋಂದಾಯಿಸಿಕೊಳ್ಳಲು ದಿನಾಂಕ **31-10-2017** ರವರೆಗೆ ಕಾಲಾವಕಾಶವನ್ನು ವಿಸ್ತರಿಸಲಾಗಿದೆ. ಪ್ರಾಂಶುಪಾಲರು, ಖಾಸಗಿ ಅಭ್ಯರ್ಥಿಗಳ ನೋಂದಣಿಗೆ ಸಂಬಂಧಿಸಿದಂತೆ ಉಳಿದ ಎಲ್ಲಾ ಸೂಚನೆಗಳನ್ನು ಉಲ್ಲೇಖ (1)ರಲ್ಲಿಇರುವಂತೆ ತಪ್ಪದೆ ಪಾಲಿಸುವುದು.

**ಸದರಿ ಪರೀಕ್ಷೆಗಳಿಗೆ ಖಾಸಗಿ ಅಭ್ಯರ್ಥಿಳು ನೊಂದಾಯಿಸಿಕೊಳ್ಳಲು ಇದೇ ಕಡೆ ಅವಕಾಶವಾಗಿರುತ್ತದೆ ಹಾಗೂ ಈ ಕಾಲಾವಕಾಶವನ್ನು ಯಾವುದೇ ಕಾರಣಕ್ಕೆ ಮುಂದೂಡಲಾಗುವುದಿಲ್ಲ.**

ಸದರಿ ವಿಶೇಷ ಕಾಲಾವಕಾಶದಲ್ಲಿ ಸಲ್ಲಿಸಲಾದ ಖಾಸಗಿ ಅಭ್ಯರ್ಥಿಗಳ ಶುಲ್ಕಗಳನ್ನು ದಿನಾಂಕ 02-11-2017 ರಂದು ಖಜಾನೆಗೆ ಸಂದಾಯ ಮಾಡುವುದು ಹಾಗೂ ಅರ್ಜಿಗಳನ್ನು ದಿನಾಂಕ 04-11-2017 ರಂದು ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವುದು. ಉಪನಿರ್ದೇಶಕರು ತಮ್ಮ ಜಿಲ್ಲೆಯಲ್ಲಿ ಹೀಗೆ ಸ್ವೀಕರಿಸಲಾದ ಅರ್ಜಿಗಳನ್ನು ಕೇಂದ್ರ ಕಛೇರಿಗೆ ದಿನಾಂಕ 07-11-2017ರಂದು ತಲುಪಿಸತಕ್ಕದ್ದು.

**ನಿರ್ದೇಶಕರು,**
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿ:

1. ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ.
2. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳಿಗೆ – ಮಾಹಿತಿಗಾಗಿ ಹಾಗೂ ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಅಂಟಿಸಲು ತಿಳಿಸಿದೆ.
3. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ.
4. ಸಹಾಯಕ ನಿರ್ದೇಶಕರು, ಇ-ಆಡಳಿತ (ಅಂತರ ಜಾಲದಲ್ಲಿ ಪ್ರಕಟಿಸಲು)
5. ಕಛೇರಿ ಪ್ರತಿ.